605 (476) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕ ಗೃಹ ಮಂಡಳಿ ಇತ್ತೀಚೆಗೆ ಸೂರ್ಯನಗರ ಹಾಗೂ ಇತರೆ ಪ್ರದೇಶಗಳಲ್ಲಿ ಲಾಟರಿ ಮೂಲಕ ನಿವೇಶನ ಹಾಗೂ ಮನೆಗಳನ್ನು ಹಂಚಿಕೆ ಮಾಡಲಾಗಿದೆಯೇ;

2) ಇದಕ್ಕಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ಹಾಗೂ ಎಷ್ಟು ಜನರಿಗೆ ಇಲ್ಲಿಯವರೆಗೆ ನಿವೇಶನ ಹಾಗೂ ಮನೆಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲಾಗಿದೆ;

3) ಗೃಹ ಮಂಡಳಿ ಅಥವಾ ಸರ್ಕಾರದ ವಿವೇಚನಾ ಕೋಟಾದಲ್ಲಿ ಈ ಮೇಲ್ಕಂಡ ಜಾಗಗಳಲ್ಲಿ ಎಷ್ಟು ನಿವೇಶನ/ಮನೆಗಳನ್ನು ಯಾರ್ಯಾರಿಗೆ ನೀಡಲಾಗಿದೆ;

4) ಈ ನಿವೇಶನ ಹಾಗೂ ಮನೆಗಳಿಗೆ ನಿಗದಿಪಡಿಸಿದ ದರವೆಷ್ಟು;

5) ಈ ಹಣವನ್ನು ಕೇವಲ ನಾಲ್ಕು ತಿಂಗಳಿಗೆ ಪಾವತಿಸಲು ಫಲಾನುಭವಿಗಳಿಗೆ ತಿಳಿಸಲಾಗಿದೆಯೇ;

6) ಈ ಹಣವನ್ನು ಕಡಿಮೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ ಹಾಗೂ ಹಣ ಪಾವತಿಸಲು ಹೆಚ್ಚು ಕಾಲಾವಕಾಶ ನೀಡಲು ಸರ್ಕಾರ ಪರಿಶೀಲಿಸುತ್ತಿದೆಯೇ?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

1) ಕರ್ನಾಟಕ ಗೃಹ ಮಂಡಳಿಯು ಸೂರ್ಯನಗರ ಯೋಜನೆಯಲ್ಲಿನ ನಿವೇಶನಗಳು, ಮನೆಗಳು ಮತ್ತು ಬಂಡೇಮಠ ಫ್ಲಾಟ್‌ಗಳನ್ನು ದಿನಾಂಕ : 6-3-2007 ರಿಂದ 9-3-2007 ರವರೆಗೆ ಮತ್ತು ಬಂಡೇಮಠ ಯೋಜನೆಯಲ್ಲಿನ ನಿವೇಶನಗಳು ಮತ್ತು ಮನೆಗಳು ದಿನಾಂಕ : 10-3-2007 ರಂದು ಲಾಟರಿ ಮಾಡುವ ಮೂಲಕ ಹಂಚಿಕೆಯನ್ನು ಮಾಡಲಾಗಿರುತ್ತದೆ.

2) ಸೂರ್ಯನಗರ ಯೋಜನೆಯಲ್ಲಿನ ಸ್ವತ್ತುಗಳ ಹಂಚಿಕೆಗಾಗಿ 13038 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು ಇದರಲ್ಲಿ 2631 ಅರ್ಜಿದಾರರಿಗೆ ಮನೆ/ನಿವೇಶನ/ಪ್ಲಾಟ್‌ಗಳನ್ನು ಹಂಚಿಕೆ ಮಾಡಲಾಗಿರುತ್ತದೆ ಹಾಗೂ ಬಂಡೇಮಠ ಸ್ವತ್ತುಗಳ ಹಂಚಿಕೆಗಾಗಿ 11403 ಅರ್ಜಿಗಳು ಸ್ವೀಕೃತವಾಗಿದ್ದು ಇದರಲ್ಲಿ 516 ಅರ್ಜಿದಾರರಿಗೆ ಮನೆ/ನಿವೇಶನಗಳನ್ನು ಲಾಟರಿ ಮಾಡುವುದರ ಮೂಲಕ ಹಂಚಿಕೆಯನ್ನು ಮಾಡಲಾಗಿರುತ್ತದೆ.

3) ವಿವೇಚನಾ ಕೋಟಾದಲ್ಲಿ ಕಾಯ್ದಿರಿಸಿರುವಂತಹ ನಿವೇಶನ, ಮನೆ ಮತ್ತು ಫ್ಲಾಟ್‌ಗಳ ಹಂಚಿಕೆಯನ್ನು ಇದುವರೆವಿಗೂ ಮಾಡಿರುವುದಿಲ್ಲ.

4) ನಿವೇಶನ, ಮನೆ ಮತ್ತು ಫ್ಲಾಟ್‌ಗಳಿಗೆ ನಿಗಧಿಪಡಿಸಿರುವ ಬೆಲೆಯ ವಿವರಗಳು ಈ ಕೆಳಕಂಡಂತಿರುತ್ತವೆ.

<u>ಸೂರ್ಯನಗರ</u>

ನಿವೇಶನ			ಫ್ಲಾಟ್‌ಗಳು		ಮನೆಗಳು
ವಿಸ್ತೀರ್ಣ	ದರ ಪ್ರತಿ ಚದರ ಅಡಿಗೆ	ವರ್ಗ	ಬೆಲೆ ರೂ. (ಲಕ್ಷಗಳಲ್ಲಿ)	ವರ್ಗ	ಬೆಲೆ ರೂ. (ಲಕ್ಷಗಳಲ್ಲಿ)
30 x 10	ರೂ.500/-	ಎಲ್.ಐ.ಜಿ	7.31 ರಿಂದ 7.47	ಎಲ್.ಐ.ಜಿ	ಬೆಲೆ ರೂ. (ಲಕ್ಷಗಳಲ್ಲಿ)
40 x 60	ರೂ.600/-	ಎಂ.ಐ.ಜಿ	18.74 ರಿಂದ 20.33	ಎಂ.ಐ.ಜಿ	31.44 ರಿಂದ 32.77
		ಎಂ.ಐ.ಜಿ 3 ಬಿಹೆಚ್‌ಕೆ	25.94 ರಿಂದ 28.22		
50 x 80	ರೂ.700/-	ಹೆಚ್.ಐ.ಜಿ 3 ಬಿಹೆಚ್‌ಕೆ	30.03 ರಿಂದ 36.39	ಹೆಚ್.ಐ.ಜಿ	57.28 ರಿಂದ 57.40 65.03 ರಿಂದ 66.60
		ಹೆಚ್.ಐ.ಜಿ 4 ಬಿಹೆಚ್‌ಕೆ	45.00	ಹೆಚ್.ಐ.ಜಿ	

<u>ಬಂಡೇಮಠ</u>

ನಿವೇಶನಗಳು			ಮನೆಗಳು	
ವರ್ಗ	ವಿಸ್ತೀರ್ಣ	ದರ ಪ್ರತಿ ಚದರ ಅಡಿಗೆ	ವರ್ಗ	ಬೆಲೆ ರೂ. (ಲಕ್ಷಗಳಲ್ಲಿ)
ಎಲ್.ಐ.ಜಿ	30 x 40	ರೂ.500/-	ಎಲ್.ಐ.ಜಿ	14.52 ರಿಂದ 14.85
ಎಂ.ಐ.ಜಿ	30 x 50	ರೂ.600/-		
ಹೆಚ್.ಐ.ಜಿ	40 x 60 & 50 x 80	ರೂ.700/-		

5) ಹಂಚಿಕೆದಾರರಿಗೆ 4 ತಿಂಗಳಲ್ಲಿ ಹಣವನ್ನು ಪಾವತಿಸಲು ತಿಳಿಸಿ ಹಂಚಿಕೆ ಪತ್ರವನ್ನು ನೀಡಲಾಗಿರುತ್ತದೆ.

6) ಬೆಲೆಯನ್ನು ಕಡಿಮೆ ಮಾಡುವ ಅಥವಾ ಹಣ ಪಾವತಿ ಮಾಡಲು ಹೆಚ್ಚು ಕಾಲಾವಕಾಶ ನೀಡುವುದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

606 (477) ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

01) ರಾಜ್ಯದಲ್ಲಿ 2007–08ನೇ ಸಾಲಿನಲ್ಲಿ ಹೊಸದಾಗಿ ಮಂಜೂರು ಮಾಡಿದ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;